ಅನ್ನುಸ್ತಾಯಿತ್ತು. ಮೊದಲ ತರ ಎಲ್ಲಾ, ಪೂರ್ತಿ ಹೇಳ್ಕೊಳ್ತಾಯಿರಲಿಲ್ಲ.'

'ಅಮ್ಮುಗೆ ಯಾರ ಜೊತೆ ಆದರೂ ಸೀರಿಯಸ್ ಜಗಳ ಇತ್ತಾ?'

'ಇತ್ತು, ತುಂಬಾ ಮೊದಲು... ಜಾಹ್ನವಿ ಜೊತೆ.'

'ಯಾರು ಆಕೆ?'

'ಅವಳು ನಾಲ್ಕೈದು ಟೀವಿ ಸೀರಿಯಲ್‌ನಲ್ಲಿ ಆ್ಯಕ್ಟ್ ಮಾಡಿರೋ ಆರ್ಟಿಸ್ಟ್.'

'ಏನಾದರೂ ದಮಕೀ ಹಾಕಿದ್ರಾ?'

'ಅಮ್ಮೂಗೆ... ನೋಡ್ತಾಯಿರು, ನೀನು ವಾಪಸ್ ನಿಮ್ಮೂರ್ಗೆ ಹೋಗೋದಿಕ್ಕೆ ಬಿಡಲ್ಲ' ಅಂತ ಓಪನ್ನಾಗಿ ಸೆಟ್ ಮೇಲೇನೆ, ಅಗ್ನಿಜಾಲ ಸೀರಿಯಲ್‌ನ ಫುಲ್ ಯುನಿಟ್ ಮುಂದೆ, ಬೆದರಿಕೆ ಹಾಕಿದ್ಳು ಜಾಹ್ನವಿ.'

'ಜಾಹ್ನವಿ ಯಾವ ರೀತಿ?'

'ಏನೋ ಡ್ರಗ್ಸ್ ಪ್ರಾಬ್ಲಂ ಇದೆ ಅನ್ನೋ ರೂಮರ್ಸ್ ಇತ್ತು. ಅಲ್ಲದೆ ತುಂಬಾ ಕೋಪ, ಹಟ ಎಲ್ಲಾ... ಒಂದ್ಸಾರಿ ಅವಳ ಪರ್ಸನಲ್ ಕಿಟ್‌ನ ಮೇಕಪ್ ಮ್ಯಾನ್ ಇನ್ನೊಬ್ಬ ಜೂನಿಯರ್ ಆರ್ಟಿಸ್ಟ್‌ಗೆ ಯೂಸ್ ಮಾಡುದ್ರೂ ಅಂತ ಅವರಿಗೆ ಸ್ಲಿಪ್ಪರ್‌ನಲ್ಲಿ ಹೊಡ್ದಿದ್ಳು... ಅವರೂ ವಾಪಸ್ ಬೈದಿದ್ರೂ... ಅದಕ್ಕೆ ಮಾರನೇ ದಿನ ಅವಳ ಕಸಿನ್ಸ್ ಇಬ್ಬರು – ರೌಡಿ ಶೀಟರ್ಸ್ ಇದ್ದಾರೆ, ಬಂದು ಆ ಮೇಕಪ್ ಮ್ಯಾನ್‌ಗೆ ಸಿಕ್ಕಾಪಟ್ಟೆ ಹೊಡ್ದಾಕ್ಬಿಟ್ಟದ್ರು ಸಾರ್.'

'ಅದಾಯ್ತು, ಅಮ್ಮೂ ಅವರ ಮೇಲೆ ಜಗಳ ಯಾಕೆ?'

'ಜಾಹ್ನವಿ ಮೊದಲು ಅಗ್ನಿಜಾಲ ಸೀರಿಯಲ್‌ಗೆ ಮೈನ್ ಕ್ಯಾರೆಕ್ಟರ್ ಅಂತ ಡಿಸೈಡ್ ಆಗಿದ್ದವಳು. ಆಡಿಷನ್‌ನಲ್ಲಿ ಬೇರೆ ಒಂದು ಸೈಡ್ ರೋಲ್‌ಗೆ ಅಮ್ಮು ಸೆಲೆಕ್ಟ್ ಆಗಿದ್ದು. ಆಮೇಲೆ ಆ ಡೈರೆಕ್ಟರ್ ದಿನೇಶ್, ಅಮ್ಮುನೇ ಮೈನ್ ಕ್ಯಾರೆಕ್ಟರ್ ಮಾಡಿ ಜಾಹ್ನವಿನ ಸೈಡ್ ಕ್ಯಾರೆಕ್ಟರ್ ಮಾಡ್ಬಿಟ್ರು. ಒಂದು, ಸೀನಿಯರ್ ಆ್ಯಕ್ಟರ್ ಆದ ನನ್ನ ಸೈಡ್ ಲೈನ್ ಮಾಡಿ ಮೈನ್ ರೋಲ್‌ನ ಕಿತ್ಕೊಂಡು ಒಬ್ಬ ಜೂನಿಯರ್‌ಗೆ ಕೊಟ್ರಲ್ಲಾ ಅನ್ನೋದಾದ್ರೆ... ಎರಡು... ಡೈರೆಕ್ಟರ್ ಜೊತೆ ಜಾಹ್ನವಿ ಸಾಕಷ್ಟು ಬೆರೆತುಕೊಂಡಿದ್ದವರು, ಈಗ ಇವಳು ಮಧ್ಯಕ್ಕೆ ಬಂದಳಲ್ಲಾ ಅಂತ ಏನೇನೋ ಇಲ್ಲದ ಕಲ್ಪನೆ ಮಾಡ್ಕೊಂಡು ಅಮ್ಮು ಮೇಲೆ ಅಸೂಯೆ ದ್ವೇಷ ಬೆಳಸ್ಕೊಂಡ್ಳೂ ಅನ್ಸುತ್ತೆ.'

'ಸೋ...'

'ಜಾಹ್ನವಿ ಡ್ರಗ್ಸ್ ಹಾಕ್ಕೊಂಡು ಸೆಟ್ ಮೇಲೆ ಬರೋದು, ಟೈಮ್ ಕೀಪಪ್ ಮಾಡ್ದೇಯಿರೋದು, ಎಲ್ಲಾರ ಹತ್ರ ಮಿಸ್ ಬಿಹೇವ್ ಮಾಡೋದು ಜಾಸ್ತಿ ಆಯ್ತು. ಕೊನೆಗೆ ಡೈರೆಕ್ಟರ್ ಸೀರಿಯಲ್‌ನಲ್ಲಿ ಅವಳ ಕ್ಯಾರೆಕ್ಟರ್‌ನೇ ಟರ್ಮಿನೇಟ್ ಮಾಡ್ಬಿಟ್ರೂ.'

ಬೇರೆ ಡೈರೆಕ್ಟರ್ಸ್ ಕೂಡ ಅವಳನ್ನ ಬ್ಲಾಕ್ ಲಿಸ್ಟ್ ಮಾಡಿದ್ರೂ. ಆಮೇಲೆ ಅಮ್ಮೂಯಿಂದ ನನ್ನ ಲೈಫ್ ಮತ್ತು ಕೆರಿಯರ್ ಎರಡೂ ಹಾಳಾಯ್ತು ಅಂತ ಹೇಳ್ಕೊಂಡು ಓಡಾಡ್ತಿದ್ಳು ಸಾರ್.'

'ಓಕೆ ಸಿತಾರ ಅವ್ರೇ, ನನಗೆ ಕಮಿಷನರ್ ಆಫೀಸ್‌ಗೆ ಹೋಗೋದಿದೆ. ನನಗೆ ನಿಮ್ಮ ಕಡೆಯಿಂದ ಇನ್ನೂ ಸ್ವಲ್ಪ ಮಾಹಿತಿ ಬೇಕು. ಮತ್ತೆ ಭೇಟಿ ಮಾಡೋಣ' ಎನ್ನುತ್ತಾ ಮಾಯಣ್ಣ, ವಿನಯ್ ಜೊತೆ ಜೀಪ್ ಏರಿ ಹೊರಟುಬಂದಿದ್ದ.

'ಜಾಹ್ನವೀನ ಸೀರಿಯಸ್ಸಾಗಿ ತಗೋಬೇಕಾ ಸಾರ್?'

'**Hell Hath No Fury Like A Woman Scorned** – ಅನ್ನೋ ಇಂಗ್ಲಿಷ್ ನುಡಿಗಟ್ಟಿನ ಕನ್ನಡ ಸಮಾನಾರ್ಥ ಗೊತ್ತ ವಿನಯ್?'

'ಇಲ್ಲ ಸಾರ್.'

'ನಾರಿ ಮುನಿದರೆ ಮಾರಿ' ಅಂತ.

ಅವನ ಭಾವಾಂತರಕ್ಕೆ ಅವನಿಗೇ ನಗು ಬಂದಿತ್ತು. ಅಷ್ಟೊತ್ತಿಗೆ ಪೀ ಜವರಯ್ಯನ ಫೋನ್ ಕರೆ ಬಂದಿತ್ತು.

'ಸಾರ್, ನೀವು ಹೇಳಿದ ರೀತೀಲೇ ಇಲ್ಲಿ ಎಲ್ಲರ ಜೊತೆ ಮಾತಾಡ್ತಾ ಓಡಾಡ್ತಿದ್ದೆ. ಇದೇ ನಮ್ಮ ಕ್ರೈಮ್ ಸ್ಪಾಟ್ ರಸ್ತೇಲಿ ಗ್ಯಾಸ್ ಡೆಲಿವರಿ ಬಾಯ್, ಕೊಲೆ ನಡೆದ ಟೈಮಲ್ಲೇ ಓಡಾಡಿದ್ದಾನೆ ಅನ್ಸುತ್ತೆ. ಡೌನಲ್ಲಿ ಹೋಗ್ಬೇಕಾದ್ರೆ ಅಮ್ಮು ಅವರ ಮನೆ ಮುಂದೆ ಒಂದು ಕಪ್ಪು ಬಣ್ಣದ ಬೆಂಜ್ ಗಾಡಿ, ಆಮೇಲೆ ಸಾಕಷ್ಟು ದೂರದಲ್ಲಿ ಬಿಳಿ ಬಣ್ಣದ ಜೀಪ್ ನಿಂತಿತ್ತಂತೆ. ಮತ್ತೆ ಸಿಲಿಂಡರ್ ಡೆಲಿವರಿ ಕೊಟ್ಟು ಅಪ್ಪಲ್ಲಿ ಬರಬೇಕಾದರೆ ಆ ಕಪ್ಪು ಬೆಂಜ್ ಕಾರು ರಸ್ತೆಯ ಅಂಚಿನ ಎಡತಿರುವಿನಲ್ಲಿ ವೇಗವಾಗಿ ತಿರುಗಿ ಮರೆಯಾಯಿತು ಮತ್ತು ಬರೀ ಆ ಜೀಪ್ ಮಾತ್ರ ಅಲ್ಲೇ ನಿಂತಿತ್ತಂತೆ ಸಾರ್.'

'ಗುಡ್, ಅದು ಬಾಳ ಯೂಸ್‌ಫುಲ್ ಇನ್‌ಫರ್ಮೇಷನ್ ಜವರಯ್ಯ. ಹಾಗೇ ಆ ಗ್ಯಾಸ್ ಡೆಲಿವರಿ ಬಾಯ್‌ನ ಸ್ಟೇಷನ್ನಿಗೆ ಬಂದು ನನ್ನ ಕಾಣೋದಿಕ್ಕೆ ಹೇಳಿ.'

5

ಮಧ್ಯಾಹ್ನದ ಬಿಸಿಲ ಬೇಗೆಯನ್ನು ನೀಗಲಾಗದ ಫ್ಯಾನು, ಮಾಯಣ್ಣನ ತಲೆಯ ಮೇಲೆ ಸುತ್ತುತ್ತಾ, ಸುಮ್ಮನೆ ಶಬ್ದ ಮಾಡುತ್ತಿತ್ತಷ್ಟೆ. ಆಗಲೇ ಅಮ್ಮು ಕೊಲೆ ನಡೆದು ಇಪ್ಪತ್ನಾಲ್ಕು ಗಂಟೆಯಾಗಿತ್ತು. ತನಿಖೆ ನಿರೀಕ್ಷಿತ ವೇಗ ಪಡೆದುಕೊಂಡಿಲ್ಲವೇನೋ ಎಂಬ ಆತಂಕ ಕದ ತಟ್ಟುತ್ತಿತ್ತು. ಆದರೆ ಈ ಪ್ರಕರಣದ ಒಬ್ಬೊಬ್ಬ ಪಾತ್ರಧಾರಿಯ ಹಿನ್ನೆಲೆ ಮತ್ತು ಅವರು ಕೊಲೆಯಾದ ಅಮ್ಮುವಿಗೆ ಸಂಬಂಧಿಸಿದ ರೀತಿ, ಇವೆಲ್ಲಾ ಕೆದಕಿ ತೆಗೆಯುವುದು ಅಷ್ಟೇ ಮುಖ್ಯವಾಗಿತ್ತು.

ಅಷ್ಟೊತ್ತಿಗೆ ಮಾಯಣ್ಣನ ಟೇಬಲ್ ಎದುರಿಗೆ ಬಂದು ನಿಂತ ಸುಮಾರು ಇಪ್ಪತ್ತು ವರ್ಷದ ಯುವಕ ತನ್ನನ್ನು ತಾನೇ ಪರಿಚಯಿಸಿಕೊಂಡ.

'ಸಾರ್ ನಾನು ಮುನಿಕ್ರಿಷ್ಣ... ಚೇತನಾ ಲೇಔಟ್ ಗ್ಯಾಸ್ ಡೆಲಿವರಿ ಬಾಯ್. ನಿಮ್ಮನ್ನ ನೋಡ್ಬೇಕು ಅಂದ್ರು.'

'ಗೊತ್ತಾಯ್ತು. ಹೇಳು, ಏನು ನೋಡ್ದೆ ಅಲ್ಲಿ ನೆನ್ನೆ?'

'ಸಾರ್, ಆ ರೋಡಲ್ಲಿ ಒಂದು ವೈಟ್ ಕಲರ್ ಕಾರ್ಗೋ ಗಾಡಿ ನಿಂತಿತ್ತು, ಅದರಿಂದ ಇನ್ನೊಂದು ಏಳು ಸೈಟ್ ಮುಂದಕ್ಕೆ ಈ ಮನೆ ಇರೋದು, ಅದರ ಮುಂದೆ ಒಂದು ಕಪ್ಪು ಬಣ್ಣದ ಬೆಂಜ್ ಕಾರ್ ನಿಂತಿತ್ತು. ರೋಡ್ ಕೆಳಗಿನ ಒಂದು ಮನೆಗೆ ಹೋಗಿ ಸಿಲಿಂಡರ್ ಡೆಲಿವರಿ ಕೊಟ್ಟು ಅದೇ ರೋಡಲ್ಲಿ ವಾಪಸ್ ಬರೋವಾಗ ಆ ಬೆಂಜ್ ಕಾರವ್ನು ರೋಡ್ ಎಂಡಲ್ಲಿ ಫಾಸ್ಟಾಗಿ ಲೆಫ್ಟ್ ಟರ್ನ್ ತಗೊಂತಿದ್ದ. ಆದರೆ ಆ ಕಾರ್ಗೋ ಗಾಡಿ ಇನ್ನೂ ಅಲ್ಲೇ ನಿಂತಿತ್ತು.'

'ಏನು ಗಾಡಿ ಅದು... ಗಾಡಿ ನಂಬರು... ಏನಾದರೂ ಗುರುತು?'

'ಸಾರ್ ನಂಬರ್ ನೋಡ್ಲಿಲ್ಲ. ಕೆ ಎ 12 ಆಮೇಲೆ ಏನೊ ಇತ್ತು. ಹಳೇ ಟಾರ್ಪಾಲ್ ಹಾಕಿರೋ ಜೀಪ್ ಇದ್ದಂಗಿತ್ತು ಸಾರ್. ಮುಂದೆ ಬಂಪರ್ ಮೇಲೆ ಕೊಡಗಿನ ಕಾವೇರಿ ಅಂತ ರೆಡ್ ಪೈಂಟಲ್ಲಿ ಬರ್ದಿದ್ರು ಸಾರ್...'

'ಒಳಗೆ ಯಾರಾನ ಇದ್ರ?'

'ಸಾರ್, ಅಷ್ಟೊತ್ಗೆ ನನ್ ಫೇವರಿಟ್ ಹಾಡ್ ಬಂತು ಸಾರ್... ಇನ್ನೇನು ಗಮನುಸ್ಲಿಲ್ಲ ಸಾರ್.'

'ಯಾವ್ದದು... ಯಾವ ಚಾನಲ್ಲು?'

'... ಶಂಕರ್‌ನಾಗ್ ಅವರ ಆಟೋರಾಜ ಹಾಡು ಸಾರ್... ಕಾಮನಬಿಲ್ಲು ಚಾನಲ್.'

'ಓಕೆ ನೀನು ಹೋಗು, ಆದರೆ ಕರೆದಾಗ ಬರಬೇಕು, ಏನೂ...'

ತಲೆಯಾಡಿಸಿ ಹೊರಟ ಮುನಿಕ್ರಿಷ್ಣ.

ಮಾಯಣ್ಣ ತಕ್ಷಣ ಆ ಕಾರ್ಗೋ ಗಾಡಿಯ ಗುರುತನ್ನು ವಾಕೀಟಾಕಿಯಲ್ಲಿ ಸಂದೇಶಿಸಿ, ಎಲ್ಲಿ ಕಂಡರೂ ತಕ್ಷಣ ಸೀಜ್ ಮಾಡುವಂತೆ ಕೋರಿದ್ದ.

ವಿನಯ್ ಎದುರಿಗೆ ಬಂದು ನಿಂತ.

'ಸಾರ್, ಫೋನ್ ಮಾಡಿದ್ದೆ ಆ ರೇಡಿಯೊ ಚಾನಲ್‌ಗೆ. ಆ ಹಾಡು ಹಾಕಿದ್ದು ಒಂಬತ್ತು ಐವತ್ತಕ್ಕೆ ಸಾರ್.'

'ಗುಡ್... ನನಗೆ ಆ ಜೀಪ್‌ಗೂ ಈ ಪ್ರಕರಣಕ್ಕೂ ಏನೋ ಸಂಬಂಧ ಇರಬಹುದೇನೋ ಅಂತ ಅನ್ಸುತ್ತೆ. ನೀವು ಮುನಿಕ್ರಿಷ್ಣ ಹೇಳಿದ ಆ ಜಾಗದಲ್ಲಿ ಏನಾದರೂ ಎವಿಡೆನ್ಸ್ ಸಿಗುತ್ತಾ ನೋಡಿ, ಹಾಗೇ ಜವರಯ್ಯ ಅವರಿಗೆ ಆ ಜೀಪ್ ಬಗ್ಗೆ ಸುತ್ತಲೂ ವಿಚಾರಣೆ ಮಾಡೋದುಕ್ಕೆ ಹೇಳಿ. ಆಮೇಲೆ ಆ ಬ್ಲಾಕ್ ಬೆಂಜ್ ಕಾರು ಜಯಂತ್‌ದು ತಾನೇ?'

'ಯೆಸ್ ಸಾರ್.'

'ನೆನ್ನೆ ಬೆಳಿಗ್ಗೆಯಿಂದ ಆ ಕಾರಿನ ಕಂಪ್ಲೀಟ್ ಮೂವ್‌ಮೆಂಟ್ ಹಿಸ್ಟರಿ ಬೇಕು.'

'ಯೆಸ್ ಸಾರ್.'

'ಆಮೇಲೆ ಆಸ್ಪತ್ರೆಯ ಪೋಸ್ಟ್ ಮಾರ್ಟಮ್ ಓಟಿ ಎದುರಿಗೆ ವೇಯ್ಟಿಂಗ್ ಕಾರಿಡಾರ್ ಇದೆಯಲ್ಲ ಅಲ್ಲಿನ ಸಿ ಸಿ ಟೀವಿದೂ ನೆನ್ನೆಯಿಂದ, ಈಗ ಮೂರು ಗಂಟೆಗೆ ಬಾಡಿ ಹ್ಯಾಂಡೋವರ್ ಮಾಡ್ತಾರಂತೆ, ಅಲ್ಲಿನ ತನಕ ಫುಟ್ಟೇಜ್ ತರಿಸಿ.'

'ಯೆಸ್ ಸಾರ್....ಆದರೆ ಅದು ಏನುಕ್ಕೆ ಸಾರ್?'

'ಯಾರ್ಯಾರು ಬಂದಿದ್ರು, ಎಷ್ಟೊತ್ತು ಕಾದು ಕುಂತಿದ್ರು, ಎಷ್ಟೆಷ್ಟು ದುಃಖದಲ್ಲಿ ಮುಳುಗೋಗಿದ್ರು ನೋಡೋಣ. ಸಮ್ ಹಿಂಟ್ಸ್ ಅಂಡ್ ಕ್ಲೂಸ್ ವಿಲ್ ಶೋ ಅಪ್ ಇನ್ ಮೋಸ್ಟ್ ಅನ್ ಲೈಕ್ಲೀ ಪ್ಲೇಸಸ್.'

ಅಷ್ಟರಲ್ಲಿ ಡಾ. ಪರಮಶಿವಯ್ಯನವರ ಫೋನ್ ಬಂದಿತ್ತು.

'ನಮಸ್ತೆ ಡಾಕ್ಟರೆ...'

'ಅಫೀಷಿಯಲ್ ಪೋಸ್ಟ್ ಮಾರ್ಟಮ್